# ಕೃಷಿ ಯಂತ್ರಧಾರೆ : ಕೃಷಿಕರಿಗೆ ವರದಾನ

**ಗೀತಾ ಎಸ್. ತಾಮಗಾಳೆ ಮತ್ತು ಅಶೋಕ ಪಿ.**

ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ –580 005

☎: 94485 52745 ಮಿಂಚಂಚೆ: tamagalegs@uasd.in

**ಮೂಲತಃ ಕೃಷಿಯೊಂದನ್ನೆ ಆದಾಯ ಮತ್ತು ಆಹಾರಗಳಿಗಾಗಿ ಉದ್ಯೋಗವನ್ನಾಗಿರಿಸಿಕೊಂಡ ಕಾಲ ಒಂದಿತ್ತು. ಅವಶ್ಯಕತೆಗಳು ಹೆಚ್ಚಿದಂತೆಲ್ಲ ನಾನಾ ಬಗೆಯ ವೃತ್ತಿಗಳು ಹುಟ್ಟಿಕೊಂಡವು. ಹೆಚ್ಚು ಲಾಭದಾಯಕವಾಗುವ ಹಾಗೂ ಕಡಿಮೆ ಶ್ರಮ ಬಯಸುವ ಕೆಲಸಗಳು ಸ್ವಾಭಾವಿಕವಾಗಿ ಆಕರ್ಷಿಸುತ್ತವೆ. ಇಂತಹ ಆಕರ್ಷಣೆಗೆ ಒಳಗಾಗಿ ಕೃಷಿ ಕಾರ್ಯ ಚಟ್ಟುವಟಿಕೆಗಳಿಗೆ ಮಾನವ ಸಂಪನ್ಮೂಲವು ಸಂಪೂರ್ಣವಾಗಿ ದಕ್ಕದಿರುವುದರಿಂದ ಯಂತ್ರಯುಗ ನಮ್ಮೆದುರಿಗೆ ನಿಂತಿದೆ. ಯಂತ್ರಗಳಿಲ್ಲದೇ ಕೃಷಿಯನ್ನು ಕೈಕೊಳ್ಳುವುದು ಕಷ್ಟವೆನಿಸಿದೆ. ರೈತ ಸ್ನೇಹಿ ಯಂತ್ರಗಳ ಬಗ್ಗೆ ಕಿರುಲೇಖನವಿದು.**



ಮುಂಗಾರಿಗೂ ಮುನ್ನ ರೈತರನ್ನು ಲೋಕಾರೂಢಿಯಾಗಿ ಮಾತನಾಡಿಸುತ್ತ ಬರುವ ಮಳೆಗಾಲದಲ್ಲಿ ಯಾವ ಬೆಳೆ ಹಾಕಬೇಕೆಂದಿರುವಿರಿ? ಎಂದು ಪ್ರಶ್ನಿಸಿದಾಗ ಬರುವ ಉತ್ತರ– ಮೆಕ್ಕೆಜೋಳ ಹಾಗೂ ಹತ್ತಿಯಂತಹ ಬೆಳೆಗಳ ಹೆಸರೆ! ಇದಕ್ಕೆ ಸೂಕ್ತ ಕಾರಣ ಕೇಳಿದಾಗ ರೈತರು ಹೇಳುವುದು ಹೊಲದಾಗ ಕೆಲಸ ಮಾಡಲು ಕೃಷಿ ಕಾರ್ಮಿಕರು ಸಿಗಂಗಿಲ್ರಿ ಎಂಬ ಉತ್ತರ. ಕೃಷಿ ಮಾನವ ಸಂಪನ್ಮೂಲ ಆಧಾರಿತ ಚಟುವಟಿಕೆಯಾಗಿದ್ದು ಇತ್ತೀಚಿನ ದಿನಗಳಲ್ಲಿ ಕೃಷಿ ಕಾರ್ಮಿಕರು ಲಭ್ಯತೆ ಬಹಳಷ್ಟು ವಿರಳವಾಗಿದ್ದು ಬೆಳೆ ಪದ್ದತಿಗಳು ಸಹ ಆಳುಗಳ ಲಭ್ಯತೆ ಮೇಲೆ ಅವಲಂಬಿತವಾಗಿವೆ. ಈ ದಿಶೆಯಲ್ಲಿ ಇರುವ ಒಂದು ಆಶಾಕಿರಣವೆಂದರೆ ಕೃಷಿ ಯಂತ್ರಧಾರೆ / ಕೃಷಿ ಯಂತ್ರಗಳ ಬಾಡಿಗೆ ಸೇವಾ ಕೇಂದ್ರ. ಕೃಷಿ ಯಂತ್ರೋಪಕರಣ ಖರೀದಿ ಮಾಡಲು ಸಾಧ್ಯವಾಗದ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಕೈಗೆಟುಕುವ ಬಾಡಿಗೆ ದರದಲ್ಲಿ ಈ ಕೇಂದ್ರಗಳಿಂದ ಯಂತ್ರಗಳನ್ನು ಪಡೆದು ಯಾಂತ್ರಿಕ ಕೃಷಿ ಕೈಗೊಳ್ಳಬಹುದು. ಕೂಲಿಯಾಳುಗಳ ಕೊರತೆ ನೀಗಿಸಿಕೊಂಡು ಸಮಯಕ್ಕೆ ಸರಿಯಾಗಿ ಬೇಸಾಯ ಕೈಗೊಂಡು ಹೆಚ್ಚು ಉತ್ಪಾದನೆ ಪಡೆಯಬಹುದು. "ಕೃಷಿ ಯಂತ್ರಧಾರೆ" ಕೇಂದ್ರಗಳು ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಪೂರೈಸುವುದರಿಂದ ಹೆಚ್ಚು ರೈತರು ಕೃಷಿಯಲ್ಲಿ ತೊಡಗುವಲ್ಲಿ ನೆರವಾಗುತ್ತದೆ.

ಕೃಷಿ ಉಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಸರಬರಾಜು ಮಾಡುವ ಕೃಷಿ ಯಂತ್ರಧಾರೆ ಕೇಂದ್ರಗಳು 2014–15 ರಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯ ಕೃಷಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿವೆ. ಸದ್ಯ ರಾಜ್ಯದಲ್ಲಿ ಸುಮಾರು 490 ಹೋಬಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೇಂದ್ರಗಳಲ್ಲಿ 25 ಜಿಲ್ಲೆಗಳ 164 ಹೋಬಳಿಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವತಿಯಿಂದ ನಡೆಸಲಾಗುತ್ತಿವೆ. ಪ್ರತಿ ಕೇಂದ್ರ ಪ್ರಥಮ ವರ್ಷ 37.5 ಲಕ್ಷದಷ್ಟು ಸಬ್ಸಿಡಿ ಪಡೆದರೆ ಎರಡನೇ ವರ್ಷ 12.50 ಲಕ್ಷ ಸಬ್ಸಿಡಿ ನೀಡಲಾಗುತ್ತದೆ. ಈ ಯಂತ್ರಗಳ ಬಳಕೆಯಿಂದ ರೈತರ ಸಮಯ ಉಳಿತಾಯವಾಗುದಲ್ಲದೇ ಹೆಚ್ಚಿನ ಲಾಭ ಸಹ ದೊರೆಯುತ್ತದೆ. ಉದಾಹರಣೆಗೆ ಕಬ್ಬು ಕೊಯ್ಲು ಮಾಡುವ

ಯಂತ್ರದ ಸಹಾಯದಿಂದ 120 ಟನ್ ಕಬ್ಬನ್ನು ಕೇವಲ 12 ಘಂಟೆಗಳಲ್ಲಿ ಕಟಾವು ಮಾಡಬಹುದು. ಅದರೇ ಅಷ್ಟೇ ಪ್ರಮಾಣದ ಕಬ್ಬನ್ನು ಆಳುಗಳಿಂದ ಕಟಾವು ಮಾಡಿಸಿದರೆ ನಮಗೆ 40 ಆಳುಗಳು 3 ದಿನಗಳಿಗಾಗಿ ಬೇಕು. ಯಂತ್ರಧಾರೆ ಆಯಾ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳಿಗೆ ಅಗತ್ಯವಾದ ಯಂತ್ರೋಪಕರಣಗಳನ್ನು ದೊರೆಯುವಂತೆ ಮಾಡುವುದು ಯೋಜನೆಯ ವಿಶೇಷ.

**ಕೃಷಿ ಯಂತ್ರಧಾರೆ ಕೇಂದ್ರಗಳ ವೈಶಿಷ್ಟ್ಯತೆ**

- ಆಧುನಿಕ ಯಂತ್ರಗಳ ಲಭ್ಯತೆ
- ಅನುಭವಿ / ನುರಿತ ಸಿಬ್ಬಂದಿ
- ಸಮಯಕ್ಕೆ ಸರಿಯಾಗಿ ಯಂತ್ರೋಪಕರಣಗಳ ಲಭ್ಯತೆ
- ಉತ್ತಮ ಸೇವೆ
- ಮುಂಗಡ ಕಾಯ್ದಿರಿಸುವಿಕೆ ವ್ಯವಸ್ಥೆ

**ಉದ್ದೇಶಗಳು**

- ಯಂತ್ರೋಪಕರಣಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸುವುದು
- ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆ ಹೆಚ್ಚಿಸುವುದು
- ಆಧುನಿಕ ಯಂತ್ರಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಲುಪಿಸುವುದು
- ಕೂಲಿ ಆಳುಗಳ ಸಮಸ್ಯೆ ನಿವಾರಿಸುವುದು
- ಯೋಗ್ಯ ಬಾಡಿಗೆ ದರದಲ್ಲಿ ಯಂತ್ರಗಳನ್ನು ಒದಗಿಸುವುದು
- ರೈತರ ಲಾಭವನ್ನು ಹೆಚ್ಚಿಸುವುದು

**ಲಭ್ಯವಿರುವ ಯಂತ್ರಗಳು :** ಟ್ರ್ಯಾಕ್ಟರ್, ಪವರ್ ಟ್ರಿಲ್ಲರ್, ಎಂ.ಬಿ. ನೇಗಿಲು ರೋಟೋವೇಟರ್, ಡಿಸ್ಕ್ ನೇಗಿಲು, ಡಿಸ್ಕ್ ಹ್ಯಾರೋ ನೇಗಿಲು, ಲೆವೆಲ್ಲರ್ ಬ್ಲೇಡ್, ಬ್ಲೇಡ್ ಕುಂಟೆ, ಲೇಸರ್ ಆಧಾರಿತ ಜಮೀನು ಸಮತಟ್ಟು ಯಂತ್ರ, ಗುಂಡಿ ತೆಗೆಯುವ ಯಂತ್ರ, ಬದು ನಿರ್ಮಾಣ ಯಂತ್ರ, ಭತ್ತ ನಾಟಿ ಯಂತ್ರ, ಬದು ಮತ್ತು ಸಾಲು ತೆಗೆಯುವ ಯಂತ್ರ, ಬಿತ್ತನೆ ಮತ್ತು ರಸಗೊಬ್ಬರ ಕೂರಿಗೆ ಯಂತ್ರ, ನರ್ಸರಿ ಟ್ರೇ, ಕಳೆ ತೆಗೆಯುವ ಯಂತ್ರ, ಹೊದಿಕೆ ಯಂತ್ರ, ಸಿಂಪರಣಾ ಯಂತ್ರಗಳು, ತೂರುವ ಯಂತ್ರ, ಒಕ್ಕಣೆ ಯಂತ್ರ, ಕಟಾವು ಯಂತ್ರ, ಟ್ರಾಲಿಗಳು, ಗರಗಸ ಹೀಗೆ ಸುಮಾರು 44 ಬಗೆಯ ಯಂತ್ರ / ಉಪಕರಣಗಳು ಯೋಜನೆಯಡಿ ಲಭ್ಯ.

ರೈತರು ತಮ್ಮ ಸಮೀಪದ ಕೃಷಿ ಯಂತ್ರಧಾರೆ ಕೇಂದ್ರಕ್ಕೆ ಬೇಟಿ ನೀಡಿ ತಮಗೆ ಬೇಕಾದ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಮುಂಗಡ ಹಣ ಪಾವತಿಸಿ ಪಡೆಯಬಹುದು. ಕೆಲಮೊಮ್ಮೆ ಒಂದೇ ಯಂತ್ರ ಏಕಕಾಲಕ್ಕೆ ಬಹಳಷ್ಟು ರೈತರಿಗೆ ಬೇಕಾಗುವ ಸಂದರ್ಭ ಬರುವ ಕಾರಣ ಮುಂಗಡ ಕಾಯ್ದಿರಿಸುವ ಸೌಲಭ್ಯ ಕೂಡ ಉಂಟು. ಪ್ರತಿ ಕೇಂದ್ರದಲ್ಲಿ ಯಂತ್ರೋಪಕರಣದ ಬಾಡಿಗೆ ದರ ಮತ್ತು ಲಭ್ಯವಿರುವ ಯಂತ್ರಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಸೇವಾ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡ ರೈತರು ಮಾತ್ರ ಯಂತ್ರಗಳನ್ನು ಪಡೆಯಬಹುದು ಹಾಗೂ ಮುಂಗಡ ಕಾಯ್ದಿರಿಸುವಾಗ ಶೇ. 20 ರಷ್ಟು ಮೊತ್ತ ಪಾವತಿಸಬೇಕು. ಉಳಿದ ಬಾಕಿ ಮೊತ್ತವನ್ನು ಯಂತ್ರವನ್ನು ಒಯ್ಯುವಾಗ ಪಾವತಿಸಬೇಕಾಗುತ್ತದೆ. ಎಲ್ಲ ಸಮಯದಲ್ಲಿ ರಸೀದಿಯನ್ನು ಪಡೆಯುವುದು ಉತ್ತಮ. ಯಂತ್ರದ ಬಳಕೆ ಅವಧಿ ಹೆಚ್ಚು/ ಕಡಿಮೆ ಆದಲ್ಲಿ ಹಣವನ್ನು ಹೆಚ್ಚಾದ ಹಣವನ್ನು ಪಾವತಿಸುವ / ಹಿಂಪಡೆಯುವ ಅವಕಾಶವಿದೆ. ಕಾಯ್ದಿರಿಸಿದ ದಿನಾಂಕವನ್ನು ಹಿಂದೂಡಲು / ಮುಂದೂಡಲು ಅವಕಾಶವಿದ್ದು ಇದನ್ನು 15 ದಿನಗಳಿಗೆ ಸೀಮಿತಗೊಳಿಸಲಾಗಿದೆ. ಕಾಯ್ದಿರಿಸುವಿಕೆಯನ್ನು 72 ಗಂಟೆಗಳಿಗಿಂತ ಮೊದಲು ರದ್ದುಗೊಳಿಸಿದರೆ ಶೇ. 100 ರಷ್ಟು ಹಣ ಮರುಸಂದಾಯ ಮಾಡಲಾಗುವುದು. ಸೇವೆಯ 42 ಗಂಟೆಗೂ ಮೊದಲು ಮಾಡಿದ ರದ್ದಿಗೆ ಶೇ. 75, 24 ಗಂಟೆಗೆ ಶೇ. 50 ರಷ್ಟು ಹಿಂದುರುಗಿಸಲಾಗುವುದು. ಅದೇ ದಿನ ರದ್ದು ಮಾಡಿದರೆ ಹಣ ಮರುಪಾವತಿಸಲಾಗುವುದಿಲ್ಲ ಬಾಡಿಗೆ ದರಗಳನ್ನು ಜಿಲ್ಲಾ ಚಾಲನಾ ಸಮಿತಿಯಿಂದ ನಿರ್ಧರಿಸಲಾಗುವುದು. ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಯಂತ್ರಗಳ ಬಾಡಿಗೆ ಹಣವನ್ನು ಮಾರುಕಟ್ಟೆಗಿಂತ ಶೇ 20 ರಿಂದ ಶೇ. 50 ರಷ್ಟು ಕಡಿಮೆ ದರವನ್ನು ನಿಗದಿ ಮಾಡಲಾಗುವುದು.

ಬಾಡಿಗೆ ಕೇಂದ್ರದಲ್ಲಿ ಯಂತ್ರಗಳ ಉಪಯೋಗ ಕುರಿತು ನುರಿತ ಸಿಬ್ಬಂದಿ ಲಭ್ಯವಿದ್ದು ಯಂತ್ರದ ಜೊತೆಗೆ ಅವರು ಬಂದು ಕಾರ್ಯನಿರ್ವಹಿಸುತ್ತಾರೆ. ಸಿಬ್ಬಂದಿಗೆ ಪ್ರತ್ಯೇಕವಾಗಿ ಹಣ ನೀಡುವ ಅಗತ್ಯ ಇರುವುದಿಲ್ಲ. ಕೆಲವೊಂದು ನುರಿತ ಸಿಬ್ಬಂದಿ ಅಗತ್ಯವಿರದ ಯಂತ್ರಗಳೂ ಸಹ ಲಭ್ಯವಿದ್ದು ಅವುಗಳನ್ನು ರೈತರಿಗೆ ನೇರವಾಗಿ ನೀಡಲಾಗುವುದು. ಬಳಕೆಯ ನಂತರ ರೈತ ಕೇಂದ್ರಕ್ಕೆ ಅವುಗಳನ್ನು ಸುರಕ್ಷಿತವಾಗಿ ತಲುಪಿಸಬೇಕಾಗುತ್ತದೆ. ಯಂತ್ರಗಳನ್ನು ಪಡೆದ ನಂತರ ಇತರೆ ಕೆಲಸಗಳಿಗೆ/ಅನುಮತಿ ಇಲ್ಲದೇ ಇತರರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಪ್ರತಿ ಕೇಂದ್ರಗಳು ಸುಮಾರು 60–70 ಲಕ್ಷ ಮೌಲ್ಯದ ಕೃಷಿ ಉಪಕರಣಗಳನ್ನು ಹೊಂದಿವೆ.

ಹಾವೇರಿ ಜಿಲ್ಲೆಯಲ್ಲಿ ಇಂತಹ ಸುಮಾರು 7 ಕೇಂದ್ರಗಳು ರೈತರ ಸೇವೆಗಾಗಿ ಲಭ್ಯವಿದ್ದು ರಾಣೇಬೆನ್ನೂರು ತಾಲ್ಲೂಕಿನ ಕುಪ್ಪೇಲೂರು ಹೋಬಳಿಯಲ್ಲಿರುವ ಕೃಷಿ ಉಪಕರಣಗಳ ಬಾಡಿಗೆ ಸೇವಾ ಕೇಂದ್ರದಲ್ಲಿ ಲಭ್ಯವಿರುವ ಕೆಲವೊಂದು ಯಂತ್ರಗಳ ವಿವರ ಹಾಗೂ ಬಾಡಿಗೆ ದರ ಈ ಕೆಳಗಿನಂತಿದೆ.

| ಕ್ರ. ಸಂ | ಲಭ್ಯವಿರುವ ಯಂತ್ರಗಳು | ಬಾಡಿಗೆ ದರ (ರೂ.) | ಯಂತ್ರದ ಉಪಯೋಗ |
|---|---|---|---|
| 1 | ಭತ್ತ ನಾಟಿ ಯಂತ್ರ | 800 | ಭತ್ತ ನಾಟಿ ಮಾಡಲು |
| 2 | ಕಳೆ ತೆಗೆಯುವ ಯಂತ್ರ | 500 | ಕಳೆ ತೆಗೆಯಲು |
| 3 | ಟ್ರಾಕ್ಟರ್ | 850 | ಉಳುಮೆ |
| 4 | ರೋಟೋವೇಟರ್ (42 ಬ್ಲೇಡ್) | 800 | ಉಳುಮೆಗೆ |
| 5 | ಎಂ.ಬಿ. ನೇಗಿಲು | 500 | ಉಳುಮೆಗೆ |
| 6 | ಕೇಜ್ ವೀಲ್ ಮತ್ತು ಪಡ್ಲರ್ | 850 | ಭತ್ತದ ಗದ್ದೆ ಉಳುಮೆಗೆ |
| 7 | ರೋಟೋವೇಟರ್ (36 ಬ್ಲೇಡ್) | 750 | ಉಳುಮೆಗೆ |
| 8 | ಬೆಳೆಗಳ ಕಟಾವು ಯಂತ್ರ (ಕಂಬೈಡ್ ಹಾರ್ವೆಸ್ಟರ್) | 1400 | ಭತ್ತ/ಮೆಕ್ಕೆಜೋಳ/ಹೆಸರು/ ಸೂರ್ಯಕಾಂತಿ |
| 9 | ಕಬ್ಬಿನ ರವದಿ ಪುಡಿ ಮಾಡುವ ಯಂತ್ರ (ಮಲ್ಟಿ ಕ್ರಾಫ್ ಮಲ್ಚರ್ ಮಿಷನ್) | 1300 | ಹತ್ತಿ ಕಟ್ಟಿಗೆ ಕಟಾವು ಮತ್ತು ಕಬ್ಬಿನ ತರಗು ಕಟಾವು |
| 10 | ಕಲ್ಟಿವೇಟರ್ (ವಿತ್ಔಟ್ ಸ್ಪ್ರಿಂಗ್) | 400 | ಉಳುಮೆಗೆ |
| 11 | ಪಲ್ಟಿ ನೆಗಿಲು (ಡಬಲ್/ಸಿಂಗಲ್) | 600 | ಉಳುಮೆಗೆ |
| 12 | ಲೆವಲರ್ ಬ್ಲೇಡ್ (ಗೋರ್ಮಣಿ) | 400 | ಉಳುಮೆ |
| 13 | ಬಿತ್ತನೆ ಕೂರಿಗೆ | 500 | ಬಿತ್ತನೆ ಮಾಡಲು |
| 14 | ಡಿಸ್ಕ್ ಪ್ಲೋ | 500 | ಉಳುಮೆ |
| 15 | ಡಿಸ್ಕ್ ಹ್ಯಾರೋ | 600 | ಉಳುಮೆ |
| 16 | ಬಲರಾಮ್ ರಂಟೆ | 500 | ಉಳುಮೆ |
| 17 | ಹತ್ತಿ ಕುಂಟೆ 3 ಪಿಟ್ /605 ಪಿಟ್ | 500 | ಉಳುಮೆ |
| 18 | ಎಚ್.ಟಿ.ಪಿ. ಸ್ಪ್ರೇಯರ್ | 250 | ಕ್ರಿಮಿನಾಶಕ ಸಿಂಪಡಿಸಲು |

ಹಾವೇರಿ, ಗದಗ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳ ವಿವರ

ನವೆಂಬರ್ 2017 ರ ವರೆಗೆ ಒಟ್ಟು 7.90 ಲಕ್ಷ ರೈತರು ಯೋಜನೆಯ ಪ್ರಯೋಜನ ಪಡೆದಿದ್ದು ಇನ್ನೂ ಹೆಚ್ಚಿನ ರೈತರಿಗೆ ಈ ಕುರಿತು ಮಾಹಿತಿ ಇಲ್ಲ. ಹಾಗಾಗಿ ನಮ್ಮ ರೈತ ಬಾಂಧವರು ಈ ಕೇಂದ್ರಗಳ ಹಾಗೂ ಇಲ್ಲಿ ಲಭ್ಯವಿರುವ ಯಂತ್ರಗಳ ಸದುಪಯೋಗ ಪಡೆದುಕೊಳ್ಳುವುದು ಅತೀ ಅವಶ್ಯಕವಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕೃಷಿ ವಿಜ್ಞಾನ ಕೇಂದ್ರ/ ಕೃಷಿ ಇಲಾಖೆಗಳನ್ನು ರೈತರು ಸಂಪರ್ಕಿಸಬಹುದಾಗಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕು | ಕೃಷಿ ಯಂತ್ರಧಾರೆ ಕೇಂದ್ರಗಳು |
|---|---|---|---|
| 1 | ಹಾವೇರಿ | ಬ್ಯಾಡಗಿ | ಕಾಗಿನೆಲೆ |
| 2 | ಹಾವೇರಿ | ಹಾವೇರಿ | ಗುತ್ತಲ |
| 3 | ಹಾವೇರಿ | ರಾಣೇಬೆನ್ನೂರ | ಕುಪ್ಪೆಲೂರ |
| 4 | ಹಾವೇರಿ | ಹಿರೇಕೆರೂರ | ಹಂಸಭಾವಿ |
| 5 | ಹಾವೇರಿ | ಸವಣೂರ | ಹತ್ತಿಮತ್ತೂರ |
| 6 | ಹಾವೇರಿ | ಹಾನಗಲ್ | ಅಕ್ಕಿಆಲೂರ |
| 7 | ಹಾವೇರಿ | ಶಿಗ್ಗಾಂವ | ಬಂಕಾಪೂರ |
| 8 | ಗದಗ | ಗದಗ | ಬೆಟಗೇರಿ |
| 9 | ಗದಗ | ಮುಂಡರಗಿ | ಡಂಬಳ |
| 10 | ಗದಗ | ನರಗುಂದ | ಕೊಣ್ಣೂರು |
| 11 | ಗದಗ | ರೋಣ | ಹೊಳೆಆಲೂರು |
| 12 | ಗದಗ | ಶಿರಹಟ್ಟಿ | ಲಕ್ಷ್ಮೇಶ್ವರ |
| 13 | ಧಾರವಾಡ | ಧಾರವಾಡ | ಅಳ್ನಾವರ |
| 14 | ಧಾರವಾಡ | ಹುಬ್ಬಳ್ಳಿ | ಛಬ್ಬಿ |
| 15 | ಧಾರವಾಡ | ಕಲಘಟಗಿ | ದುಮ್ಮವಾಡ |
| 16 | ಧಾರವಾಡ | ಕುಂದಗೋಳ | ಸಂಶಿ |
| 17 | ಧಾರವಾಡ | ನವಲಗುಂದ | ಅಣ್ಣಿಗೇರಿ |
| 18 | ಉತ್ತರ ಕನ್ನಡ | ಅಂಕೋಲಾ | ಬಳಲೆ |
| 19 | ಉತ್ತರ ಕನ್ನಡ | ಭಟ್ಕಳ | ಮಾವಳ್ಳಿ |
| 20 | ಉತ್ತರ ಕನ್ನಡ | ಹಳಿಯಾಳ | ಹಳಿಯಾಳ |
| 21 | ಉತ್ತರ ಕನ್ನಡ | ಹೊನ್ನಾವರ | ಮಂಕಿ |
| 22 | ಉತ್ತರ ಕನ್ನಡ | ಕಾರವಾರ | ಕಿನ್ನಾರ |
| 23 | ಉತ್ತರ ಕನ್ನಡ | ಕುಮುಟಾ | ಕುಜಳ್ಳಿ |
| 24 | ಉತ್ತರ ಕನ್ನಡ | ಮುಂಡಗೋಡ | ಪಾಳಾ |
| 25 | ಉತ್ತರ ಕನ್ನಡ | ಸಿದ್ದಾಪುರ | ಕೊಡಕಣಿ |
| 26 | ಉತ್ತರ ಕನ್ನಡ | ಶಿರಸಿ | ಬನವಾಸಿ |
| 27 | ಉತ್ತರ ಕನ್ನಡ | ಜೋಯಿಡಾ | ಕುಂಬಾರವಾಡ |
| 28 | ಉತ್ತರ ಕನ್ನಡ | ಯಲ್ಲಾಪುರ | ಮಂಚಿಕೇರಿ |

******